ಡಲ್ಲಾಸ್‌ಗೆ ಹೊರಡುವಾಗ ಬೀಳ್ಕೊಡಲು ಎಲ್ಲರೂ ಏರ್‌ಪೋರ್ಟಿಗೆ ಹೋಗಿದ್ದೆವು. ಮಾತನಾಡುತ್ತ ನಾನು "ಕೆಲವು ವರ್ಷಗಳ ಕಾಲ ಅಲ್ಲಿದ್ದು ಸುತ್ತಮುತ್ತ ನೋಡ್ಕೊಂಡು ಎಂಜಾಯ್ ಮಾಡಿ. ಒಂದಷ್ಟು ದುಡ್ಡು ಮಾಡ್ಕೊಂಡು ಮರಳಿ ಸ್ವದೇಶಕ್ಕೆ ಬನ್ನಿ" ಎಂದಿದ್ದೆ. ತಕ್ಷಣ ಪದ್ಮಿನಿ "ಇದನ್ನೇ ನೋಡಿ ಮಿಡಲ್‌ಕ್ಲಾಸ್ ಮೆಂಟಾಲಿಟಿ ಅನ್ನೋದು. ಅವರವರ ಭವಿಷ್ಯದ ಪ್ರಶ್ನೆಯನ್ನು ಅವರಿಗೇ ಬಿಟ್ಟುಬಿಡಬೇಕು. ಎಲ್ಲಿ ಬೇಕೋ ಅಲ್ಲಿ ಸೆಟಲ್ ಆಗ್ಲಿ. ಕೇಳಕ್ಕೆ ನಾವು ಯಾರು?" ಎಂದಿದ್ದರು. ಕೂಡಲೇ ತೀಕ್ಷ್ಣವಾಗಿ ಪ್ರತಿಕ್ರಿಯಿಸಿದ ಸುಮಂತ "ಹುಟ್ಟಿಸಿ ಇಷ್ಟು ದಿನಗಳವರೆಗೆ ಸಾಕಿ ಬೆಳೆಸಿದ ತಂದೆತಾಯಿಗಳಿಗೆ ಅಷ್ಟು ಹೇಳಲು ಹಕ್ಕಿರುತ್ತೆ. ಬರೀ ಥಳಕು ಬಳುಕು ಮಾಡ್ತಾ ಮಜಾ ಮಾಡಿದ್ರೆ ಆಯ್ತಾ? ಮುಂದಿನ ಜೀವನ ನೋಡಬೇಕಲ್ಲ..." ಎಂದಿದ್ದ. ಪದ್ಮಿನಿಯ ಮುಖ ಇಳಿದುಹೋಯ್ತು. ಅನಂತ "ತಿರುಗಿ ಬರುವ ವಿಷಯ ಬಿಡಿ. ಸದ್ಯಕ್ಕೆ ಹೋಗಿ ಸೇರಬೇಕಲ್ಲ. ನೀವೆಲ್ಲ ಸಂತಸದಿಂದ ಕಳಿಸಿದರೆ ನೆಮ್ಮದಿಯಿಂದ ಹೋಗಬಹುದು" ಎಂದು ನಗೆಯಾಡಿದ್ದ. ಆದರೆ ಸಂತಸದಿಂದ ಕಳಿಸಲು ಯಾರಿಗೂ ಸಾಧ್ಯವಾಗಿರಲಿಲ್ಲ. ಕಣ್ತುಂಬಿ ಉರುಳಿದ ಹನಿಗಳು ಸಾಲುಗಟ್ಟಿದ್ದವು.

ಕೋಣೆಯಲ್ಲಿ ಒಂದು ಗಂಟೆ ವಿಶ್ರಾಂತಿ ಪಡೆಯುವಷ್ಟರಲ್ಲಿ ಸ್ನೇಹಿತರಿಂದ ಮಾಹಿತಿ ಸಂಗ್ರಹಿಸಿ ಅಷ್ಟಲಕ್ಷ್ಮಿ ದೇವಸ್ಥಾನಕ್ಕೆ ಕರೆದೊಯ್ದ ಸುಮಂತ. ಪಕ್ಕಕ್ಕೇ ಬೆಸೆಂಟ್ ಬೀಚ್. "ಸಾಕು ಕಣೋ" ಎಂದರೂ ಕೇಳದೇ ಮರೀನಾ ಬೀಚಿಗೂ ಕರೆದೊಯ್ದ. ನೀಲ ನಭದ ಕೆಳಗೆ ನೀಲಸಾಗರದ ಮುಂದೆ ವಿಶಾಲವಾದ... ಸುಂದರವಾದ ಮರಳಿನ ಹಾಸು. ನನಗೆ ಗೋವಾದ ನೆನಪಾಗಿತ್ತು. ವಸಂತ ಎಷ್ಟು ನೀರಾಟವಾಡಿದ್ದರು ಇಬ್ಬರೂ ಮಕ್ಕಳ ಜೊತೆಯಲ್ಲಿ... ಕಲಂಗೂಟ್ ಬೀಚಿನಲ್ಲಿ ಎಲ್ಲರೂ ತೊಯ್ದು ತೊಪ್ಪೆಯಾಗಿದ್ದೆವು. ನಾನೆಷ್ಟು ಬೇಡವೆಂದರೂ ಕೇಳದೇ ಮಕ್ಕಳಿಬ್ಬರನ್ನೂ ತೆರೆಯ ಮಧ್ಯೆ ಕರೆದೊಯ್ಯುತ್ತಿದ್ದರು. ನನ್ನ ಆತಂಕ ನೋಡಿ ಮೂವರೂ ನಗುತ್ತಿದ್ದರು. ಒಬ್ಬರಿಗೊಬ್ಬರು ನೀರೆರೆಚುತ್ತ ಗಂಟೆಗಳ ಕಾಲ ಕುಣಿದಿದ್ದೆವು. ಅಷ್ಟು ಗಟ್ಟಿಯಾಗಿದ್ದವರು ಅನಂತನ ಮದುವೆಯಾಗಿ ಒಂದೇ ವರ್ಷಕ್ಕೆ ಹಾರ್ಟ್‌ಅಟ್ಯಾಕ್ ಆಗಿ ಹೋಗಿಬಿಟ್ಟರೂಂದ್ರೆ... ಇನ್ನೂ ನಂಬಕ್ಕೆ ಆಗಲ್ಲ. ಆದರೆ ಅದು ಸತ್ಯ. ಈಗೆಲ್ಲಾ ಬರೀ ನೆನಪು ಮಾತ್ರ. ಬೇಡವೆಂದರೂ ಕಣ್ಣಹನಿ ಇಳಿಯಿತು. "ಏನಾಯ್ತಮ್ಮಾ?..." ಎಂದು ಕೇಳಿದವನ ಕೈ ಹಿಡಿದು ಮರಳಿನಲ್ಲಿ ಮುಂದೆ ನಡೆಯುತ್ತ "ಏನಿಲ್ಲಪ್ಪ... ನಿಮ್ಮಪ್ಪನ ನೆನಪಾಯ್ತು. ಗೋವಾದಲ್ಲಿ..." ಎನ್ನುತ್ತ ತುಟಿ ಕಚ್ಚಿ ಹಿಡಿದೆ. "ಅಮ್ಮಾ, ಅಪ್ಪನನ್ನು ನಾವ್ಯಾರೂ ಮರಳಿ ತರಲು ಸಾಧ್ಯವಿಲ್ಲ. ನೆನಪುಗಳೇ ಶಾಶ್ವತ. ವಸ್ತುಸ್ಥಿತಿಯನ್ನು ಒಪ್ಪಿಕೊಂಡು ಬಾಳಬಾರದೇ?" ಎಂದವನ ಮುಖ ನೋಡಿದೆ. "ಆಗ ನನ್ನ ಬದುಕು ಸುಂದರವಾಗಿತ್ತು ಕಣೊ. ಎಲ್ಲರ ಪ್ರೀತಿ ತುಂಬಿತ್ತು. ಈಗೆಲ್ಲಾ ಖಾಲಿ... ಖಾಲಿ" ಎಂದೆ ಗದ್ಗದಿತಳಾಗಿ. ನನ್ನ ಭುಜ ಬಳಸಿದವ "ಅಯ್ಯೋ... ಇದೇ ತಪ್ಪು ಅನ್ನೋದು. ಇದ್ದಷ್ಟು ದಿನ ಅಪ್ಪ ನಮ್ಮನ್ನೆಲ್ಲ ಸಂತೋಷವಾಗಿಟ್ಟಿದ್ರು. ನಮಗಾಗಿ ಏನೆಲ್ಲಾ ಮಾಡ್ತಿದ್ರು. ನಿನ್ನ ಹಿರೀ ಮಗ ಅನಂತ ನಿನ್ನ ಆಜ್ಞಾಧಾರಕನಾಗಿದ್ದ. ಐದು ನಿಮಿಷ ಹೊರಗೆ ಹೋಗಬೇಕಾದರೂ ನಿನ್ನ ಅನುಮತಿ ಪಡೆಯುತ್ತಿದ್ದ. ಬಾತ್ರೂಮಿಗೆ ಹೋಗುವಾಗಲೂ ನಿನ್ನ ಕೇಳಿಯೇ ಹೋಗ್ತಿದ್ದ. ಈಗಲೂ ಆಜ್ಞಾಧಾರಕನೇ. ನಿನ್ನದಲ್ಲ... ತನ್ನ ಹೆಂಡತಿಯ... ತನ್ಮೂಲಕ ಅತ್ತೆಯ..." ಎನ್ನುತ್ತಿದ್ದಾಗ ಕಣ್ಣಲ್ಲಿದ್ದ ಹನಿಯೊಡನೆ ನಗುವೂ ಉಕ್ಕಿತು.

ಮರುದಿನ ಬೆಳಗಾಯಿತು. ಮತ್ತದೇ ದಿನಚರಿ. ತಿಂಡಿ ಪೂರೈಸುತ್ತಲೇ ಸುಮಂತ ಮತ್ತೊಮ್ಮೆ ಎಲ್ಲಾ ತೋರಿಸಿಕೊಟ್ಟ. "ಈವತ್ತು ಸಂದರ್ಶನವಿರುತ್ತೆ. ಅಮೆರಿಕೆಯ ಜನಾನೇ ಮಾಡ್ತಾರೆ. ಅವರ ಆ್ಯಕ್ಸೆಂಟ್ ಅರ್ಥವಾಗದಿದ್ದರೆ ಮತ್ತೊಮ್ಮೆ ಕೇಳು. ಒಂದೇ ಸ್ವಂತ ಮನೆ ಇರೋದು. ಅದು... ನಿನ್ನ ಹೆಸರಲ್ಲೇ ಇದೆ ಅನ್ನು. ಮಗ ಫಂಡಿಂಗ್ ಮಾಡಿ ಹೆರಿಗೆಗೋಸ್ಕರ ಕರಿಸ್ಕೋತಿದಾನೆ ಅನ್ನು. ಅವನ ವಿಳಾಸ ಜ್ಞಾಪಕದಲ್ಲಿಟ್ಕೋ. ಟೆನ್‌ಷನ್ ಮಾಡ್ಕೋಬೇಡ" ಎನ್ನುತ್ತಲೇ ಆಟೊ ಹತ್ತಿಸಿ